
ಶ್ರೀ ವಿವೇಕಾನಂದ ಗುರುವರ, ನವಯುಗಾಚಾರ್ಯ,
ರಾಮಕೃಷ್ಣರ ಭೀಮಶಿಷ್ಯನೆ, ವೀರವೇದಾಂತಿ,
ಭಾರತಾಂಬೆಯ ಧೀರಪುತ್ರನೆ, ಸಾಧುಭೈರವನೆ,
ಸ್ಥೈರ್ಯದಚಲವೆ, ಧೈರ್ಯದಂಬುಧಿ,
ಜಯತು ! ಜಯ ಜಯತು!

ಚಿದ್ ಋತಾಗ್ನಿಯ ಚಂಡಕಾಂತಿಯೆ,
ಮೇರು ಸಂನ್ಯಾಸಿ,
ಭರತಖಂಡದ ನಂದಿದಿದ್ದಲಿಗಿತ್ತೆ ತೇಜವನು;
ಬೊಮ್ಮದಂಬುಧಿಗಲೆಯನೀಯುವ
ಭರದ ಬಿರುಗಾಳಿ,
ಬೂದಿಮುಚ್ಚಿದ
ಭರತಭೂಮಿಯನೂದಿ
ಬೆಳಗಿಸಿದೆ !



ಬ್ರಹ್ಮವಿದ್ಯೆಯ ದಿವ್ಯ ದೀಪ್ತಿಯ ದೇಶದೇಶದಲಿ
ಹರಡಿ, ಅಭಯವನೀಯುತಮೃತವ
ಸುರಿದು ಪಾಲಿಸಿದೆ ;
ಗಗನಕೆತ್ತಿದೆ ಭಾರತಾಂಬೆಯ ಕೀರ್ತಿಕೇತನವ;
ಓಜೆ ತುಂಬಿಹುದಾರ್ಯ ಮಾತೆಯ
ಶ್ರೀ ನಿಕೇತನವ !

ನಿನ್ನ ಹೆಸರದೆ ಶಕ್ತಿಯೀಯುವ
ದಿವ್ಯತರ ಮಂತ್ರ;
ನಿನ್ನ ಮಾರ್ಗವೆ ಮುಕ್ತಿದಾಯಕವಾದ
ವರಮಾರ್ಗ ;
ನಮ್ಮ ಹೃದಯಕೆ ಹೃದಯ
ನೀನಯ್, ಶಕ್ತಿಸಾಗರನೆ,
ಯಮನ ನುಂಗಿನ
ರಾಜಯೋಗಿಯೆ,
ರುಂದ್ರ ಸಂನ್ಯಾಸಿ !

ಭರತಖಂಡದೊಳ ರಚುತಲೆಯುವ ಮನುಜಕುರಿಗಳಿಗೆ
ಸಿಂಹಹೃದಯವನಿತ್ತು ಗರ್ಜಿಸುವಂತೆ ನೀ ಮಾಡಿ
ಕುರಿಯ ದೊಡ್ಡಿಯ ಮುರಿದು ಸಿಂಹದ ಗುಹೆಯ ವಿರಚಿಸಿದೆ,
ಸಿಂಹಹೃದಯನೆ, ಶ್ರೀ ವಿವೇಕಾನಂದಯೋಗೀಂದ್ರ !

ನಿಶೆಯ ಗಗನದೊಳಿರುವ ತಾರೆಯ ತೆರದಿ ರಂಜಿಸಿದೆ ;
ಜಗದ ಕಂಗಳು ನೋಡಲಾರದೆ ನಿನ್ನ ತೇಜವನು
ವಿಸ್ಮಯಾಶ್ಚರ್ಯದಲಿ ನಿಂತುವು ಮೂಗುವೆರಗಾಗಿ !
ನಿನ್ನ ಮಹಿಮೆಯ ಸವಿವ ಸೆರೆಯೇ ಮುಕ್ತಿ, ವರಯೋಗಿ!

ಮೊರೆದು ಗರ್ಜಿಪ ಕಡಲ ವಾಣಿಯು ನಿನ್ನ ವರವಾಣಿ,
ಕಾರಮಿಂಚನು ನಗುವ ತೇಜವು ನಿನ್ನ ಮೈಕಾಂತಿ,
ಆಳವಂಬುಧಿಯಾಳ, ಮೇರೆಯೆ ನಭದ ವಿಸ್ತಾರ ;
ಮಂದರಾದ್ರಿಯ ಮೀರಿದಚಲನು ನೀನು, ಯೋಗೀಂದ್ರ !

ನಿನ್ನ ಧೈರ್ಯ ಸ್ಥೈರ್ಯ ದೃಢತೆಯು, ನಿನ್ನ ಪವಿಶಕ್ತಿ
ಭಾರತೀಯರಿಗಿಂದು ಬೇಕಾಗಿಹುದು ದಿವ್ಯಾತ್ಮ!
ರುದ್ರನರ್ತನವೆಸಗು ಹೃದಯದಿ, ಬುದ್ಧಿ ಭೈರವನೆ ;
ರುದ್ರಭೂಮಿಗಳಾಗಲೆಮ್ಮೀ ಕ್ಷುದ್ರ ಹೃದಯಗಳು !

ಶ್ರೀ ವಿವೇಕಾನಂದ ಗುರುವರ, ನವಯುಗಾಚಾರ್ಯ,
ರಾಮಕೃಷ್ಣ ಭೀಮಶಿಷ್ಯನೆ, ವೀರವೇದಾಂತಿ,
ಭಾರತಾಂಬೆಯ ಧೀರಪುತ್ರನೆ, ಸಾಧುಭೈರವನೆ,
ಸ್ಥೈರ್ಯದಚಲವೆ, ಧೈರ್ಯದಂಬುಧಿ,
ಜಯತು ! ಜಯ ಜಯತು !

– ಶ್ರೀ ಕುವೆಂಪು

*With Best Compliments from*

# Avenue Super Chits(P) Ltd.,

**#21, 2nd Floor,**
**Hospital Road,**
**(Near Menaka Theatre)**
**Bangalore-53**

ನನ್ನ ಆದರ್ಶವನ್ನು ಕೆಲವೇ ಪದಗಳಲ್ಲಿ ಹಿಡಿದಿಡಬಹುದು. ಅದೆಂದರೆ, 'ಮಾನವತೆಗೆ ಅವರ ದಿವ್ಯತೆಯನ್ನು ಮತ್ತು ಅದನ್ನು ತಮ್ಮ ಜೀವನದ ಪ್ರತಿಯೊಂದು ಕ್ಷಣದಲ್ಲಿಯೂ ಪ್ರಕಟಗೊಳಿಸುವುದು ಹೇಗೆಂದು ಉಪದೇಶಿಸುವುದು.'


– ಸ್ವಾಮಿ ವಿವೇಕಾನಂದ

# ಸ್ವಾಮಿ ವಿವೇಕಾನಂದರ ವೇದಾಂತ ಮಾನವತಾವಾದ

### 'ಮಾನವತಾವಾದ' ಎಂದರೇನು?

ಜರ್ಮನ್ ದೇಶದ ಪ್ರಸಿದ್ಧ ತತ್ತ್ವಶಾಸ್ತ್ರಜ್ಞನಾದ ಇಮ್ಯಾನುಯೆಲ್ ಕ್ಯಾಂಟ್ ಹೀಗೆ ಹೇಳುತ್ತಾನೆ: "ನಿನ್ನ ಬಗ್ಗೆ ಅಥವಾ ಇನ್ನೊಬ್ಬ ವ್ಯಕ್ತಿಯ ಜೊತೆಗೆ ನೀನು ಹೇಗೆ ನಡೆದುಕೊಳ್ಳಬೇಕೆಂದರೆ, ಯಾವತ್ತೂ ಒಬ್ಬ ಮನುಷ್ಯನನ್ನು 'ಗುರಿ'ಯೆಂದು ನೀನು ಭಾವಿಸಿ ನಡೆದುಕೊಳ್ಳಬೇಕೇ ಹೊರತು, ಬೇರಾವುದಕ್ಕೋ 'ಸಾಧನ'ದಂತೆ ಅಲ್ಲ." ಈ ವಾಕ್ಯವು 'ಮಾನವೀಯತೆ' ಎಂದರೆ ಏನು ಎನ್ನುವುದನ್ನು ನಮಗೆ ಗೊತ್ತುಪಡಿಸುತ್ತದೆ. ಮಾನವ ಇತಿಹಾಸದಲ್ಲಿ ಜನರನ್ನು ಯಾವುದೋ ಸ್ವಾರ್ಥ ಉದ್ದೇಶಕ್ಕಾಗಿ ರಾಜರು, ಸರ್ವಾಧಿಕಾರಿಗಳು ಬಳಸಿಕೊಳ್ಳುವುದನ್ನು ನಾವು ನೋಡುತ್ತೇವೆ. ಸ್ವಂತ ಲಾಭಕ್ಕಾಗಿ ಯುದ್ಧಗಳಲ್ಲಿ ಸಾವಿರಾರು ಜನರನ್ನು ಬಲಿಕೊಡುವುದು ಇಂತಹ ಕೃತ್ಯಗಳಲ್ಲಿ ಒಂದು. ಇಲ್ಲಿ ಮಾನವನನ್ನು 'ಸಾಧನ'ವನ್ನಾಗಿ ಬಳಸಿಕೊಂಡಿರುವುದನ್ನು ಕಾಣುತ್ತೇವೆ. ಇದೇ ಅಮಾನವೀಯತೆ. ಹಾಗೆ ಮಾಡದೆ, ವ್ಯಕ್ತಿಯೊಬ್ಬನ ಆಶೋತ್ತರಗಳು, ದುಃಖ ದುಮ್ಮಾನಗಳು, ನೋವುನಲಿವುಗಳು – ಇವುಗಳನ್ನೇ ಕಳಕಳಿಯ ವಿಷಯವನ್ನಾಗಿ ಮಾಡಿಕೊಂಡು, ಅವನನ್ನೇ ಎಲ್ಲ ರಾಜಕೀಯ ನಿಯಮಗಳ, ಸಾಮಾಜಿಕ ಕಟ್ಟುಪಾಡುಗಳ ಮತ್ತು ಧಾರ್ಮಿಕ ವಿಷಯಗಳ ಕೇಂದ್ರಬಿಂದುವನ್ನಾಗಿ ಮಾಡಿಕೊಳ್ಳಬೇಕು. ಬೇರೆಲ್ಲ ಧ್ಯೇಯೋದ್ದೇಶಗಳೂ ಮಾನವಕಲ್ಯಾಣದ ಗುರಿಗೆ ಅಧೀನವಾಗಿರಬೇಕು. ಇದನ್ನೇ 'ಮಾನವೀಯತೆ' ಎಂದು ಕರೆಯುವುದು.

ಈ ಹಿನ್ನೆಲೆಯಲ್ಲಿ ಮಾನವೀಯತಾವಾದದ ವ್ಯಾಖ್ಯಾನವನ್ನು ಹೀಗೆ ನೀಡಬಹುದು: "ಮಾನವ ಮೌಲ್ಯಗಳ ಮತ್ತು ಸಮಸ್ಯೆಗಳ ಮೇಲೆ ಕೇಂದ್ರೀಕರಿಸಿದ, ಅಧ್ಯಯನ, ತತ್ತ್ವಶಾಸ್ತ್ರ, ಪ್ರಾಪಂಚಿಕ ದೃಷ್ಟಿ ಅಥವಾ ಪ್ರಯೋಗದ ವಿಧಾನವನ್ನೇ 'ಮಾನವೀಯತಾವಾದ' ಎಂದು ಕರೆಯಬಹುದು." ತತ್ತ್ವಶಾಸ್ತ್ರ ಮತ್ತು ಸಮಾಜಶಾಸ್ತ್ರಗಳಲ್ಲಿ, ಮಾನವತಾವಾದವೆಂದರೆ, ಮಾನವ ಸ್ವಭಾವವನ್ನು ಕುರಿತ ಯಾವುದಾದರೊಂದು ಅಭಿಪ್ರಾಯವನ್ನು ಖಾತರಿಪಡಿಸುವ ದೃಷ್ಟಿಕೋನ. ಪಾಶ್ಚಾತ್ಯ ಮಾನವೀಯತಾವಾದದಲ್ಲಿ ಎರಡು ಬಗೆಗಳಿವೆ: ೧. ಧಾರ್ಮಿಕ ಮತ್ತು ೨. ಲೌಕಿಕ. ಲೌಕಿಕ ಮಾನವತಾವಾದವು ಮಾನವನ ಜೀವನವನ್ನು ರೂಪಿಸುವಲ್ಲಿ ಅತೀಂದ್ರಿಯ ವಸ್ತು (ದೇವರು ಮುಂತಾದವು) ಪ್ರಮುಖ ಪಾತ್ರ ವಹಿಸುತ್ತದೆ ಎಂಬ ವಾದವನ್ನು ತಿರಸ್ಕರಿಸುತ್ತದೆ. ಧಾರ್ಮಿಕ ಮಾನವತಾವಾದವು ಮಾನವನ ಅಸ್ತಿತ್ವದಲ್ಲಿ ದೇವರು ವಹಿಸುವ ಪಾತ್ರವನ್ನು ಒಪ್ಪಿಕೊಳ್ಳುತ್ತದೆ. ಲೌಕಿಕ ಮಾನವತಾವಾದವು ತರ್ಕ, ನೀತಿ ಮತ್ತು ನ್ಯಾಯನಿರ್ಧಾರಣೆಗಳನ್ನೇ ತನ್ನ ಸಿದ್ಧಾಂತದಲ್ಲಿ ಅಳವಡಿಸಿಕೊಳ್ಳುತ್ತದೆ ಹಾಗೂ ನೈತಿಕತೆ ಮತ್ತು ನಿರ್ಧಾರ ಪ್ರಕ್ರಿಯೆಗಳಲ್ಲಿ ಅಪ್ರಾಕೃತ ಅಥವಾ ಧಾರ್ಮಿಕ ನಂಬಿಕೆಗಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತದೆ. ಇದಕ್ಕೆ ವಿರುದ್ಧವಾಗಿ, ಧಾರ್ಮಿಕ ಮಾನವತಾವಾದವು ಮಾನವೀಯ ನೈತಿಕ ತತ್ತ್ವ ಮತ್ತು ಧಾರ್ಮಿಕ



ಆಚರಣೆ ಹಾಗೂ ನಂಬಿಕೆ – ಇವೆರಡನ್ನೂ ತನ್ನ ತೆಕ್ಕೆಯಲ್ಲಿ ತಂದುಕೊಳ್ಳುತ್ತದೆ; ಒಟ್ಟಾರೆ, ಧಾರ್ಮಿಕವಾಗಲಿ, ನೈತಿಕವಾಗಲಿ ಮಾನವನ ಆವಶ್ಯಕತೆಗಳು, ಆಸಕ್ತಿಗಳು ಮತ್ತು ಸಾಮರ್ಥ್ಯಗಳನ್ನೇ ಅದು ತನ್ನ ಅಧ್ಯಯನದ ಕೇಂದ್ರವನ್ನಾಗಿ ಮಾಡಿಕೊಂಡಿದೆ.

### ಧರ್ಮ ಮತ್ತು ಮಾನವೀಯತಾವಾದ

ಪಾಶ್ಚಾತ್ಯ ಚಿಂತಕರು ಲೌಕಿಕ ಮಾನವೀಯತಾವಾದಕ್ಕೇ ಹೆಚ್ಚು ಮಹತ್ವವನ್ನು ಕೊಟ್ಟಿರುವರು. ಏಕೆಂದರೆ, ಪಾಶ್ಚಾತ್ಯ ಜಗತ್ತಿನಲ್ಲಿ ಧರ್ಮವು ಮಾನವೀಯತೆಗೆ ವಿರುದ್ಧವಾದುದು ಎಂಬ ಅಭಿಪ್ರಾಯ ತಲೆತಲಾಂತರಗಳಿಂದಲೂ ಮೈಗೂಡಿದೆ. ಅವರ ಪ್ರಕಾರ ಧರ್ಮವು ಅಪ್ರಾಕೃತ ಸಂಗತಿಗಳಿಗಷ್ಟೇ ಪ್ರಾಮುಖ್ಯತೆ ಕೊಡುತ್ತದೆಯೇ ಹೊರತು ಮಾನವನಿಗೆ ಅಲ್ಲ. ಹೀಗೆ ಧರ್ಮವು ಮಾನವನನ್ನು ಅಮಾನುಷ ಮತ್ತು ಅತೀಂದ್ರಿಯವಾದ ದೇವರೊಬ್ಬನ ಅಡಿಯಾಳಾಗಿ ಮಾಡಿಬಿಟ್ಟಿದೆ ಎಂದು ಪಾಶ್ಚಾತ್ಯ ಚಿಂತಕರು ಅಭಿಪ್ರಾಯಪಡುತ್ತಾರೆ. ಲೌಕಿಕ ಮಾನವೀಯತಾವಾದದ ಪ್ರತಿಪಾದಕರ ಪ್ರಕಾರ, ಯಾವುದೇ ರೀತಿಯ ನೈತಿಕತೆಯ ಆಧಾರಶಿಲೆಯೆನ್ನುವುದು ಸ್ವತಃ ಮಾನವನೇ ಆಗಿರಬೇಕೇ ಹೊರತು, ಕಾಣದ ಯಾವುದೋ ದೇವರಲ್ಲ.

ಈ ರೀತಿಯ ಅಭಿಪ್ರಾಯಕ್ಕೆ ಒಂದು ಬಲವಾದ ಕಾರಣ ಇದೆ. ಅದು ಹೀಗಿದೆ: ಪಾಶ್ಚಾತ್ಯ ಜಗತ್ತಿನಲ್ಲಿ ನಾವು ಇತಿಹಾಸದುದ್ದಕ್ಕೂ ಸಂಘಟನಾತ್ಮಕ ಧರ್ಮಪದ್ಧತಿಯನ್ನು ಕಾಣುತ್ತೇವೆ. ಅಂತಹ ಧರ್ಮವು ಸಾಮಾನ್ಯ ಮನುಷ್ಯನ ಮೇಲೆ ದಬ್ಬಾಳಿಕೆ ನಡೆಸುತ್ತಿತ್ತೇ ಹೊರತು, ಮಾನವನನ್ನು ತನ್ನ ಧ್ಯೇಯಗಳ ಕೇಂದ್ರವನ್ನಾಗಿ ಮಾಡಿಕೊಂಡಿರಲಿಲ್ಲ. ಹೀಗಾಗಿ ಹಲವಾರು ರೀತಿಯ ಯುದ್ಧಗಳು, ಕಲಹಗಳು, ಸಂಘರ್ಷಗಳು ಧರ್ಮದ ಹೆಸರಿನಲ್ಲಿ ನಡೆದವು; ಹಿಂಸೆಯು ತಾಂಡವವಾಗಿ, ರಕ್ತದ ಕೋಡಿಯು ಹರಿಯಿತು. ಇದರ ವಿರುದ್ಧ ಸಿಡಿದೆದ್ದ ಹೋರಾಟದ ಧ್ವನಿಯಾಗಿ ಮಾನವೀಯತಾವಾದವು ಪಾಶ್ಚಾತ್ಯರಲ್ಲಿ ಹೆಚ್ಚಾಗಿ ಬೆಳೆದುಬಂತು.

'ಧರ್ಮ'ವು ಜೀವನದ ಇತರೆ ಅಂಶಗಳಿಗಿಂತ ಭಿನ್ನ ಎಂಬ ತಪ್ಪು ಅಭಿಪ್ರಾಯ ಇದ್ದಾಗ ಮಾತ್ರವೇ ಈ ರೀತಿಯ ದುರದೃಷ್ಟಕರ ಸನ್ನಿವೇಶವನ್ನು ಎದುರಿಸಬೇಕಾಗುತ್ತದೆ. ಆದರೆ ಧರ್ಮವು ಜೀವನದಲ್ಲಿ ಓತಪ್ರೋತವಾಗಿರುವ ಅಂಶವೆಂದು ಅರಿತುಕೊಂಡಾಗ, ಅದನ್ನು ಮಾನವೀಯ ಕಳಕಳಿಗಳಿಂದ ಹೊರಗಡೆ ಇಡಲು ಸಾಧ್ಯವಾಗುವುದಿಲ್ಲ. ಮಾನವ ಇತಿಹಾಸದಲ್ಲಿ, ಜನರು ಧಾರ್ಮಿಕ ನಂಬಿಕೆಯನ್ನು ಪೂರ್ಣವಾಗಿ ತ್ಯಜಿಸಿದ ಒಂದು ನಿರ್ದಿಷ್ಟ ಕಾಲಾವಧಿಯನ್ನು ನಾವೆಂದೂ ಕಾಣಲಾರೆವು. ಮಾನವೀಯತೆಯನ್ನು ತನ್ನ ಬಾಹುಗಳಲ್ಲಿ ಅಪ್ಪಿಕೊಳ್ಳುವ ಶ್ರೇಷ್ಠಮಟ್ಟದ ಧರ್ಮದ ವಿವರಣೆಯನ್ನು ಪಾಶ್ಚಾತ್ಯ ತತ್ತ್ವಶಾಸ್ತ್ರದ ಗ್ರಂಥವೊಂದರಲ್ಲಿ ಹೀಗೆ ಕಾಣಬಹುದು: "ಧರ್ಮವನ್ನು ಭಾವಿಸಬೇಕು, ಚಿಂತಿಸಬೇಕು; ಅದನ್ನು ಜೀವಿಸಬೇಕು, ಕಾರ್ಯರೂಪಕ್ಕೆ ತರಬೇಕು. ಈ ದೃಷ್ಟಿಯಲ್ಲಿ ಧರ್ಮವೆಂಬುದು ಜೀವನದ ಒಂದು ಭಾಗ ಮಾತ್ರವಾಗಿಬಿಡುವುದಿಲ್ಲ; ಅದು ಯಾವುದೇ ಸಮಯ ಅಥವಾ ಪ್ರದೇಶಕ್ಕೆ ಸೀಮಿತಗೊಳ್ಳುವುದಿಲ್ಲ. ಧರ್ಮವೆಂದರೆ ಬರಿ ಆಚರಣೆಗಳಲ್ಲ, ಸಿದ್ಧಾಂತಗಳಲ್ಲ ಅಥವಾ ಸಂಘಟನೆಗಳಲ್ಲ. ಆದರೆ ಅವೆಲ್ಲವೂ ಧಾರ್ಮಿಕ ನಂಬಿಕೆಗಳನ್ನು ಪ್ರಚೋದಿಸುವಲ್ಲಿ ಮತ್ತು ಪ್ರಕಟಿಸುವಲ್ಲಿ ಸಹಾಯಕ ಸಾಧನಗಳಾಗಬಹುದು, ಅಷ್ಟೇ" (Ref: Living Issues in Philosophy, by Harold H Titus, Marilyn S Smith, Richard T Nolan, Oxford University Press, Page 360).

ಭಾರತದಲ್ಲಿ ನಾವು ಹೆಚ್ಚಾಗಿ ಕಾಣುವುದು, ಈ ಬಗೆಯ ಸಮಗ್ರ ಧರ್ಮದ ಕಲ್ಪನೆಯನ್ನು ಆಧಾರವಾಗಿಟ್ಟುಕೊಂಡು ಮೂಡಿದ 'ಧಾರ್ಮಿಕ ಮಾನವತಾವಾದ'ವನ್ನೇ. ಇದಕ್ಕೆ ಕಾರಣ ಸುಸ್ಪಷ್ಟ. ಇಲ್ಲಿ ಧರ್ಮವು ಸಂಘಟಿತವಾಗಿ ಮಾಡುವ ಆಚಾರವಿಚಾರಗಳಿಗೆ ಸೀಮಿತಗೊಂಡಿರಲಿಲ್ಲ. ಅದಕ್ಕೆ ಬದಲಾಗಿ ವ್ಯಕ್ತಿಯೊಬ್ಬನ ನಡವಳಿಕೆ, ನೈತಿಕ ಸಂವೇದನೆ, ಅವನ ವ್ಯಕ್ತಿತ್ವದ ಗುಣ – ಇವುಗಳನ್ನೇ ಧರ್ಮದ ಪ್ರಧಾನ ಅಂಶಗಳನ್ನಾಗಿ ಪರಿಗಣಿಸಲಾಗಿತ್ತು. ಮಹಾಭಾರತದಲ್ಲಿ ನೀಡಲಾಗಿರುವ ಧರ್ಮದ ವ್ಯಾಖ್ಯಾನದಲ್ಲಿ ಇದನ್ನು ಸ್ಪಷ್ಟಪಡಿಸಲಾಗಿದೆ. "ನಮಗೆ ಯಾವುದು ಹಿತವಾಗಿದೆಯೋ, ಅದನ್ನೇ ಇತರರಿಗೂ ಮಾಡುವುದೇ ಧರ್ಮ. ನಮಗೆ ಯಾವುದು ಅಹಿತವಾಗಿದೆಯೋ, ಅದನ್ನು ಇತರರ ವಿಷಯದಲ್ಲಿ ಮಾಡುವುದು ಅಧರ್ಮ." ಹಾಗೆಯೇ ವೇದವ್ಯಾಸರು, "ಸನಾತನ ಧರ್ಮವೆಂದರೆ ಇದೇ – ಪರೋಪಕಾರವೇ ಪುಣ್ಯ, ಪರಪೀಡನೆಯೇ ಪಾಪ" ಎಂದು ನೇರವಾಗಿ ಹೇಳಿದ್ದಾರೆ. ಹೀಗಾಗಿ ನಮ್ಮಲ್ಲಿ ಮಾನವೀಯತೆ ಮತ್ತು ಧಾರ್ಮಿಕತೆಗಳು ಬೇರೆ ಬೇರೆ ಎಂದು ಯಾವತ್ತೂ ಪರಿಗಣಿತವಾಗಿರಲಿಲ್ಲ. 'ನಿಜವಾದ ಮಾನವೀಯತೆಯೇ ಧರ್ಮ' ಎಂಬ ಶ್ರದ್ಧೆಯೇ ಬಹಳ ಹಿಂದಿನಿಂದಲೂ ಬೆಳೆದುಕೊಂಡುಬಂದಿತ್ತು. "ದಯವಿಲ್ಲದ ಧರ್ಮ ಯಾವುದಯ್ಯಾ, ದಯವೇ ಬೇಕು ಸಕಲ ಪ್ರಾಣಿಗಳಲ್ಲಿ" ಎನ್ನುವ ಬಸವಣ್ಣನವರ ಮಾತುಗಳಲ್ಲಿ ಈ ಭಾವನೆ ಪ್ರಭಾವಶಾಲಿಯಾಗಿ ಮೂಡಿಬಂದಿದೆ.

## ವೇದಾಂತವು ಪ್ರತಿಪಾದಿಸುವ ಮಾನವತಾವಾದ

ವೇದಾಂತವೆಂದರೆ ಉಪನಿಷತ್ತುಗಳು ಪ್ರತಿಪಾದಿಸುವ ತತ್ತ್ವವಿಚಾರ. ಈ ತತ್ತ್ವವಿಚಾರದಲ್ಲಿ ಮಾನವನು ಬಹು ಪ್ರಮುಖ ಪಾತ್ರವನ್ನು ಪಡೆಯುತ್ತಾನೆ. ಹೀಗಾಗಿ ಉಪನಿಷತ್ತುಗಳು 'ಮಾನವ ಕೇಂದ್ರಿತ'ವಾದುವು ಎಂದು ಹೇಳಬಹುದು. ಮಾನವನ ನಿಜವಾದ ವ್ಯಕ್ತಿತ್ವ ಇರುವುದು ದೇಹ, ಮನಸ್ಸು, ಬುದ್ಧಿಗಳಿಗೆ ಚೈತನ್ಯವನ್ನು ನೀಡುವ 'ಆತ್ಮ' ಎಂಬ ಅತೀಂದ್ರಿಯ ತತ್ತ್ವದಲ್ಲಿ ಎಂದು ಅವು ಪ್ರತಿಪಾದಿಸುತ್ತವೆ. ಆತ್ಮವು ಪರಿಶುದ್ಧ ಅಸ್ತಿತ್ವವಾಗಿದೆ (**ಸತ್**); ಪರಿಶುದ್ಧ ಜ್ಞಾನವಾಗಿದೆ (**ಚಿತ್**) ಮತ್ತು ಪರಿಶುದ್ಧ ಆನಂದವೂ ಆಗಿದೆ (**ಆನಂದ**). ಆದ್ದರಿಂದಲೇ ಅದನ್ನು **ಸತ್–ಚಿತ್–ಆನಂದ** ಎಂದು ಕರೆಯುವುದು. ಮಾನವನ ನಿಜವಾದ ಘನತೆ, ಗೌರವ, ಸ್ಥಾನಮಾನಗಳು ಒದಗುವುದು ಅವನು ತಾನು ಸಚ್ಚಿದಾನಂದ ಸ್ವರೂಪವಾದ ಆತ್ಮ ಎಂದು ಕಂಡುಕೊಂಡಾಗ ಮಾತ್ರ. ಮಾನವನು ಅಮೃತರೂಪನಾಗಿದ್ದಾನೆ. ಅವನು ಕಾಲ ದೇಶ ಕಾರಣಗಳಿಗೆ ಅತೀತನಾಗಿದ್ದಾನೆ. ಇದು ವೇದಾಂತವು ಪ್ರತಿಪಾದಿಸುವ ಮಾನವ ದರ್ಶನ. ಮಾನವನ ಬಗೆಗಿನ ಬೇರೆ ಯಾವ ಸಿದ್ಧಾಂತವೂ ನಿಜವಾದ ಮಾನವನನ್ನು ಸರಿಯಾಗಿ ವಿವರಿಸುವುದಿಲ್ಲ.

## ಸ್ವಾಮಿ ವಿವೇಕಾನಂದರ ಮಾನವತಾವಾದ

ವೇದಾಂತದ ಪ್ರಾಚೀನ ಸಂದೇಶವು ಸ್ವಾಮಿ ವಿವೇಕಾನಂದರ ಮಾತುಗಳಲ್ಲಿ ಮಾರ್ದನಿಸಿರುವುದನ್ನು ನಾವು ಕಾಣಬಹುದು. ಅಮೆರಿಕದಲ್ಲಿ ಸ್ವಾಮೀಜಿ ಭಾಷಣ ಮಾಡುತ್ತಿದ್ದಾಗ, ಒಬ್ಬ ಮಹಿಳೆಗೆ ಆದ ಅನುಭವ ಇದನ್ನು ಸ್ಪಷ್ಟಪಡಿಸುತ್ತದೆ. ಆಕೆಯ ಹೆಸರು ಎಲ್ಲಾ ವೀಲರ್ ವಿಲ್‌ಫಾಕ್ ಎಂದು. ಆಕೆ ಒಂದು ಪತ್ರಿಕೆಗೆ ಬರೆದ ಲೇಖನದಲ್ಲಿ ಹೀಗೆ ಹೇಳಿಕೊಳ್ಳುತ್ತಾಳೆ: " ಹನ್ನೆರಡು ವರ್ಷಗಳ ಹಿಂದಿನ ಒಂದು ಸಂಜೆ ನಾನು ಭಾರತದಿಂದ ಬಂದಿದ್ದ ತತ್ತ್ವಬೋಧಕರೊಬ್ಬರ ಭಾಷಣವನ್ನು ಕೇಳಲು ಹೋಗಿದ್ದೆ. ಅವರ ಹೆಸರು ವಿವೇಕಾನಂದ. ಅವರು ನನ್ನ ಊರಾದ ನ್ಯೂಯಾರ್ಕ್‌ನಲ್ಲಿ ಭಾಷಣ ಮಾಡುವವರಿದ್ದರು. ನಾನು ಮತ್ತು ನನ್ನ ಪತಿ ಕುತೂಹಲದಿಂದ ಭಾಷಣ ಕೇಳಲು ಹೋದೆವು. ಹತ್ತು ನಿಮಿಷಗಳ ಕಾಲ ಕೇಳುಗರ ಮಧ್ಯೆ ಇದ್ದೆವಷ್ಟೆ, ನಾವು ಯಾವುದೋ ಅದ್ಭುತ, ಪ್ರಾಣದಾಯಕ, ಅತೀಂದ್ರಿಯ ವಾತಾವರಣಕ್ಕೆ ಒಯ್ಯಲ್ಪಟ್ಟೆವು. ಆ ಭಾಷಣ ಮುಗಿದ ಮೇಲೆ, ನಾವು ಹೊಸ ಧೈರ್ಯ, ಹೊಸ ನಂಬಿಕೆ, ಹೊಸ ಶಕ್ತಿ, ಹೊಸ ಶ್ರದ್ಧೆಗಳೊಡನೆ ದಿನನಿತ್ಯದ ಜಂಜಾಟಗಳನ್ನು ಎದುರಿಸಲು ಸಿದ್ಧರಾಗಿ ತೆರಳಿದೆವು... ಅಂದಿನಿಂದ ಹಲವು ತಿಂಗಳುಗಳ ಕಾಲ ನನ್ನ ಪತಿಯು ನನ್ನೊಡನೆ ಸ್ವಾಮಿ ವಿವೇಕಾನಂದರು ಪ್ರಾಚೀನ ಧರ್ಮವನ್ನು ಬೋಧಿಸುವುದನ್ನು

ಕೇಳಲು, ಹಾಗೆಯೇ ಅವರ ಅತ್ಯದ್ಭುತ ಮನಸ್ಸು ಹೊರಸೂಸುತ್ತಿದ್ದ ಸತ್ಯದ ರತ್ನಗಳನ್ನು ಮತ್ತು ಆಶೆ ಹಾಗೂ ಶಕ್ತಿಗಳ ಚಿಂತನೆಗಳನ್ನು ಹೆಕ್ಕಿಕೊಳ್ಳಲು ಬರುತ್ತಿದ್ದರು.”

ಆಕೆ ಮುಂದುವರೆದು ಹೀಗೆ ಬರೆಯುತ್ತಾರೆ: “ ಯಾವ ತತ್ತ್ವ ವಿಚಾರ, ಯಾವ ಧರ್ಮ, ಒತ್ತಡ ಹಾಗೂ ಆಯಾಸಗಳ ಈ ಯುಗದಲ್ಲಿ ಮೇಲೆ ಹೇಳಿದ ಅನುಭವವನ್ನು ತರಬಲ್ಲುದೋ, ಅದರೊಂದಿಗೆ, ಭಗವಂತನಲ್ಲಿ ಶ್ರದ್ಧೆಯನ್ನು ಉತ್ಕಟಗೊಳಿಸಿ ಈ ಜನ್ಮದಲ್ಲಿ ಮತ್ತು ಮುಂದಿನ ಜನ್ಮಗಳಲ್ಲಿ ಆತ್ಮವಿಶ್ವಾಸಭರಿತ ಸಂತೋಷವನ್ನು ಕೊಡಬಲ್ಲುದೋ, ಅದೇ ಒಳಿತಾದ ಮತ್ತು ಮಹತ್ತಮವಾದ ಧರ್ಮ.” ಸ್ವಾಮಿ ವಿವೇಕಾನಂದರು ತಮ್ಮ ಜೀವಮಾನದಲ್ಲಿ ಉಪದೇಶಿಸಿದ ಧರ್ಮ ಇಂತಹ ಮಾನವೀಯತೆಯ ಧರ್ಮ.

## ವಿವೇಕಾನಂದ ಚಿಂತನಾಧಾರೆ

ಸ್ವಾಮಿ ವಿವೇಕಾನಂದರ ಸಂದೇಶದಲ್ಲಿ ಕಾಣಬರುವ ಮಾನವೀಯತೆಗೆ ಸಂಬಂಧಪಟ್ಟ ಅಂಶಗಳನ್ನು ಅವರ ವಾಣಿಯ ಮೂಲಕವೇ ನಾವು ಹೀಗೆ ಪಟ್ಟಿಮಾಡಬಹುದು:

**೧. ಮಾನವನ ಘನತೆ :** “ಮಾನವ ದೇಹವು ಇಡೀ ವಿಶ್ವದಲ್ಲಿಯೇ ಅತ್ಯಂತ ಶ್ರೇಷ್ಠವಾದುದು. ಮಾನವನು ಇಡೀ ವಿಶ್ವದಲ್ಲಿಯೇ ಅತ್ಯಂತ ಮಹೋತ್ತಮ ಜೀವಿಯಾಗಿದ್ದಾನೆ.”

**೨. ಮಾನವನ ಅಧಃಪತನ:** “ಎಲ್ಲ ಧರ್ಮಗಳೂ ಮಾನವನು, ತಾನು ಹಿಂದೆ ಆಗಿದ್ದರ ಕೆಳಮಟ್ಟದ ಸ್ವರೂಪದವನಾಗಿದ್ದಾನೆ ಎಂದೇ ಪ್ರತಿಪಾದಿಸುತ್ತವೆ.”

**೩. ನೈಜ ಮಾನವ ಮತ್ತು ತೋರಿಕೆಯ ಮಾನವ:** “ನೈಜಮಾನವನೆಂದರೆ ಏಕಮೇವ, ಅನಂತ, ಸರ್ವವ್ಯಾಪಕ ಆತ್ಮ. ತೋರಿಕೆಯ ಮಾನವನೆಂದರೆ ನಾವು ಲೌಕಿಕ ಸ್ತರದಲ್ಲಿ ಇಟ್ಟುಕೊಂಡಿರುವ ಮಾನವನ ಭಾವನೆ. ಇಂತಹ ಭಾವನೆ ಎಷ್ಟೇ ದೊಡ್ಡದಾಗಿದ್ದರೂ, ಅದು ನೈಜಮಾನವನ ಅತ್ಯಂತ ಕಳಪೆಯಾದ ಪ್ರತಿಫಲನವಷ್ಟೇ.”

**೪. ಆತ್ಮನ ವೈಭವ :** “ಯಾವುದೇ ಗ್ರಂಥವಾಗಲಿ, ಯಾವುದೇ ಶಾಸ್ತ್ರವಾಗಲಿ, ಯಾವ ವಿಜ್ಞಾನವಾಗಲಿ ಮಾನವನ ರೂಪದಲ್ಲಿ ಕಾಣಿಸಿಕೊಂಡಿರುವ ಆತ್ಮನ ವೈಭವವನ್ನು ಬಣ್ಣಿಸಲಾಗದು.”

**೫. ಮಾನವನು ಭಗವಂತನ ಪ್ರತೀಕ:** “ನೀವು ಭಗವಂತನನ್ನು ಆರಾಧಿಸಲು ಒಂದು ವಿಗ್ರಹವನ್ನು ಕಂಡುಹಿಡಿಯಬಹುದು. ಆದರೆ ಇಲ್ಲೇ, ಈಗಾಗಲೇ ಅದಕ್ಕಿಂತಲೂ ಉತ್ತಮ ವಿಗ್ರಹವೊಂದು ಅಸ್ತಿತ್ವದಲ್ಲಿದೆ. ಅದೆಂದರೆ ಜೀವಂತ ಮಾನವ. ನೀವು ಭಗವಂತನನ್ನು ಆರಾಧಿಸಲು ಒಂದು ದೇಗುಲವನ್ನು ಕಟ್ಟಬಹುದು. ಅದು ಒಳ್ಳೆಯದೇ. ಆದರೂ ಅದಕ್ಕಿಂತಲೂ ಉತ್ತಮವಾದ ದೇವಾಲಯವೊಂದಿರುವುದು. ಅದೇ ಈ ಮಾನವ ಶರೀರ.”

**೬. ಮಾನವನು ಪಾಪಿಯಲ್ಲ :** “ಮಾನವನನ್ನು ಪಾಪಿಯೆಂದು ಕರೆಯದಿರು. ಅವನು ಭಗವಂತನೇ ಸರಿ. ಪ್ರತಿಯೊಬ್ಬ ಮಾನವನೂ ಈಗಾಗಲೇ ಅನಂತಸ್ವರೂಪಿಯೇ ಆಗಿದ್ದಾನೆ. ನೀವು ನಿಮ್ಮನ್ನು ಆತ್ಮವೆಂದು ಪರಿಗಣಿಸಿದರೆ, ನಿತ್ಯವಾದ ಆ ಮಹಾನ್ ಅಗ್ನಿಯ ಒಂದು ಕಿಡಿಗಳಾಗಿದ್ದೀರಿ. ನೀವು ನಿಮ್ಮನ್ನು ಆತ್ಮವೆಂದು ಭಾವಿಸಿದರೆ, ನೀವು ಸರ್ವವೂ ಈಗಾಗಲೇ ಆಗಿರುತ್ತೀರಿ. ಮಾನವನನ್ನು ಪಾಪಿಯೆಂದು ಕರೆಯುವುದೇ ಘೋರ ಪಾತಕ. ಅದು ಮಾನವನ ಸ್ವಭಾವಕ್ಕೇ ಬಗೆಯುವ ಮಹಾದ್ರೋಹ.”

**೭. ಭಗವಂತನ ಮಕ್ಕಳು :** “ನೀವೆಲ್ಲರೂ ಭಗವಂತನ ಮಕ್ಕಳು. ಅಮೃತಾನಂದದ ಭಾಗಿಗಳು, ಪರಿಶುದ್ಧಾತ್ಮರು ನೀವು, ಪರಿಪೂರ್ಣರು ನೀವು. ಆ ಭೂಮಿಯಲ್ಲಿರುವ ದಿವ್ಯಾತ್ಮರೇ ನೀವು.”

ಸ್ವಾಮಿ ವಿವೇಕಾನಂದರ ಪ್ರಮುಖ ಕೊಡುಗೆಯೆಂದರೆ ವೇದಾಂತವನ್ನು ಮಾನವಧರ್ಮವನ್ನಾಗಿ ಪ್ರಸ್ತುತಪಡಿಸಿದ್ದು. ಆ ಮೂಲಕ ಸೇವೆಯನ್ನು ಅನುಷ್ಠಾನಧರ್ಮವನ್ನಾಗಿ ಆಚರಿಸುವಂತೆ ಕರೆನೀಡಿದ್ದು. ಇದರಿಂದ ಅವರು ಸಾಧಿಸಿದ ಕಾರ್ಯಗಳು ಮೂರು: **೧. ಧರ್ಮ ಮತ್ತು ಮಾನವತೆಗಳ ನಡುವಿನ ಅಂತರವನ್ನು ತೆಗೆದುಹಾಕಿದ್ದು. ೨. ವೇದಾಂತಕ್ಕೆ ಹೊಸರೂಪವನ್ನು ಕೊಟ್ಟು ಅದು ಜನಸಾಮಾನ್ಯರಲ್ಲಿ ಅನುಷ್ಠಾನಕ್ಕೆ ಬರುವ ಹಾಗೆ ಮಾಡಿದ್ದು. ೩. ಉಪನಿಷತ್ತುಗಳ ಉಪದೇಶದ ಆಧಾರದ ಮೇಲೆ ‘ಮಾನವ’ನ ಬಗ್ಗೆ ಒಂದು ವಿನೂತನ ಕಲ್ಪನೆಯನ್ನು ಕೊಟ್ಟು, ಲೌಕಿಕ ಸ್ತರದಲ್ಲಿಯೂ ಮಾನವನ ಘನತೆಯನ್ನು ಎತ್ತಿಹಿಡಿದಿದ್ದು.**

ಸ್ವಾಮಿ ವಿವೇಕಾನಂದರು ಮಾನವಪ್ರೇಮಿ. ಮಾನವನ ಸಾಧನೆಗಳ ಬಗ್ಗೆ ಅವರಿಗೆ ಅಪಾರ ಅಭಿಮಾನ. ಮಾನವ ಜನಾಂಗವು ಸಾಧಿಸಿರುವ ಎಲ್ಲ ಬೌದ್ಧಿಕ ಮತ್ತು ಭೌತಿಕ ಸಾಧನೆಗಳಿಗೆ ಶಕ್ತಿಯನ್ನು ಒದಗಿಸಿರುವುದು ಮಾನವನ ಚಾರಿತ್ರ್ಯವೇ ಎಂದು ಅವರು ಅಭಿಪ್ರಾಯಪಡುತ್ತಾರೆ. ಈ ಬಗ್ಗೆ ಅವರು ತಮ್ಮ ‘ಕರ್ಮಯೋಗ’ ಗ್ರಂಥದಲ್ಲಿ ಹೀಗೆ ಹೇಳಿದ್ದಾರೆ: “ಈ ಪ್ರಪಂಚದಲ್ಲಿ ನಮ್ಮ ಕಣ್ಣಿಗೆ ಬೀಳುವ ಎಲ್ಲ ಕರ್ಮಗಳೂ, ಮಾನವ ಸಮಾಜದಲ್ಲಿ ಆಗುವ ಸಮಸ್ತ ಚಲನೆಗಳೂ, ನಮ್ಮ ಸುತ್ತಲೂ ನಡೆಯುವ ಕಾರ್ಯಗಳೂ ಕೂಡ ಆಲೋಚನೆಗಳ ಪ್ರದರ್ಶನ, ಮನುಷ್ಯನ ಇಚ್ಛಾಶಕ್ತಿಯ ಅಭಿವ್ಯಕ್ತಿ. ಯಂತ್ರಗಳು, ಸಾಧನಗಳು, ಪಟ್ಟಣಗಳು, ಹಡಗುಗಳು, ಯುದ್ಧ ನೌಕೆಗಳು – ಇವೆಲ್ಲವೂ ಮನುಷ್ಯನ ಇಚ್ಛಾಶಕ್ತಿಯ ಅಭಿವ್ಯಕ್ತಿ ಮಾತ್ರ. ಈ ಇಚ್ಛಾಶಕ್ತಿಗೆ ಮೂಲ, ಚಾರಿತ್ರ್ಯವೇ...”

ತಾವು ೧೮೯೪ರ ಡಿಸೆಂಬರ್ ೩೦ನೆಯ ತಾರೀಖು ಅಮೆರಿಕದ ಬ್ರೂಕ್ಲಿನ್‌ನಲ್ಲಿ ಮಾಡಿದ ಭಾಷಣದಲ್ಲಿ ವೇದಾಂತದ ಉದ್ದೇಶವನ್ನು ಸ್ವಾಮೀಜಿ ಸ್ಪಷ್ಟ ಶಬ್ದಗಳಲ್ಲಿ ಹೀಗೆ ವಿವರಿಸುತ್ತಾರೆ: “ವೇದಾಂತವು ಬೋಧಿಸುವುದು ಇದನ್ನೇ – ನಿಮ್ಮ ಆತ್ಮವನ್ನು ಕರೆಯಿರಿ. ನಿಮ್ಮ ದಿವ್ಯತೆಯನ್ನು ಪ್ರಕಟಮಾಡಿಕೊಳ್ಳಿ. ನಿಮ್ಮ ಮಕ್ಕಳಿಗೆ ಅವರೆಲ್ಲ ದಿವ್ಯಾತ್ಮರೆಂದು ಬೋಧಿಸಿ. ಧರ್ಮವೆಂದರೆ ನಕಾರಾತ್ಮಕವಾದ ಯಾವುದೋ ಪೊಳ್ಳು ಸಂಗತಿಯಲ್ಲ. ಧರ್ಮವೆಂದರೆ ಶೋಷಣೆಗೆ ಒಳಗಾದಾಗ ಅಳುತ್ತಿರುವುದೂ ಅಲ್ಲ. ಧರ್ಮವೆಂದರೆ ವಿಕಾಸ ಮತ್ತು ಅಭಿವ್ಯಕ್ತಿ.”

ಇಲ್ಲಿ ದಿನನಿತ್ಯದ ಜೀವನದ ಬಗ್ಗೆ ನಕಾರಾತ್ಮಕ ಮತ್ತು ನಿರಾಶಾದಾಯಕ ದೃಷ್ಟಿ ಹೊಂದಿದೆ ಎಂದು ಪಾಶ್ಚಾತ್ಯ ವಿದ್ವಾಂಸರು ಪರಿಗಣಿಸುವ ವೇದಾಂತ ಧರ್ಮ ಮತ್ತು ತತ್ತ್ವಶಾಸ್ತ್ರಕ್ಕೆ ಹೊಸದಿಶೆಯನ್ನೇ ಸ್ವಾಮೀಜಿ ನೀಡುತ್ತಾರೆ. ವೇದಾಂತವು ಮಾನವಜೀವನವನ್ನು ಉತ್ಸಾಹದಾಯಕವೂ, ಪರಿಪೂರ್ಣವೂ, ಸಾರ್ಥಕವೂ ಆಗಿ ಹೇಗೆ ಮಾಡುತ್ತದೆ ಎನ್ನುವುದರ ಉಲ್ಲಾಸಕಾರಿ ಪರಿಚಯ ಮೇಲಿನ ವಾಕ್ಯಗಳಲ್ಲಿ ನಮಗೆ ಸಿಗುತ್ತದೆ.